**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 5/2022</u>**

**ದಿನಾಂಕಃ 23.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ತಮ್ಮಯ್ಯ | ಚಾಸಾ-1, ಪ್ರಾಸ.-1 |
| ತಂದೆಯ  ಹೆಸರು | ಃ | ಕೃಷ್ಣಪ್ಪ | |
| ವಯಸ್ಸು | ಃ | 40 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಗಾಳಿಹಳ್ಳಿ | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿಃ 02.08.2021 ರಂದು ಸಮಯ ಸಂಜೆ 4.00 ಗಂಟೆಗೆ ನಾನು ನನ್ನ ಜಮೀನಿಗೆ ಹೋಗಿದ್ದು ಆ ಸಮಯದಲ್ಲಿ 1 ನೇ ಆರೋಪಿಯವರು ನನ್ನ ಜಮೀನಿನಲ್ಲಿ ಎಮ್ಮೆ ಮತ್ತು ಮೇಕೆಯನ್ನು ಮೇಯಿಸುತ್ತಿದ್ದರು. ಆಗ ನಾನು 1 ನೇ ಆರೋಪಿಯನ್ನು ನನ್ನ ಜಮೀನಿನಲ್ಲಿ ನೀನು ಯಾಕೆ  ಎಮ್ಮೆ ಮತ್ತು ಮೇಕೆಯನ್ನು ಮೇಯಿಸುತ್ತಿದ್ದಿಯಾ ಎಂದು ಕೇಳಿದಾಗ 1 ನೇ ಆರೋಪಿಯವರು ನನ್ನನ್ನು ಉದ್ದೇಶಿಸಿ ಅವ್ಯಾಚ್ಯ ಶಬ್ದಗಳಿಂದ ನಿಂಧಿಸಿದರು. ಆಗ ನಾನು ಚಾಸಾ-3 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದು ಚಾಸಾ-3 ರವರು 2 ನೇ ಆರೋಪಿಯ ಹಿತ್ತಲಿಗೆ ಬಂದರು. ಆಗ ಚಾಸಾ-3 ರವರು 1 ನೇ ಅರೋಪಿಯವರಿಗೆ ನಮ್ಮ ಜಮೀನಿನಲ್ಲಿ ಎಮ್ಮೆ ಮತ್ತು ಮೇಕೆಯನ್ನು ಮೇಯಿಸುತ್ತಿದ್ದಿಯಾ ಎಂದು ಕೇಳಿದ್ದು, ಆಗ 1 ನೇ ಅರೋಪಿಯು ಚಾಸಾ-3 ರವರಿಗೆ ಅವ್ಯಾಚ್ಯ ಶಬ್ದಗಳಿಂದ ನಿಂಧಿಸಿದರು. ಆಗ 2 ನೇ ಆರೋಪಿ ನನ್ನ ಎದೆಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ-3 ರವರು ಸ್ಥಳಕ್ಕೆ ಬಂದು ಜಗಳ ಬಿಡಿಸಿ ನನ್ನನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ.

ಸುಮಾರು 5.30 ಗಂಟೆಗೆ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 08.08.2021 ರಂದು ಪೋಲಿಸರು ನನ್ನ ಜಮೀನಿಗೆ ಸ್ಥಳ ಮಹಜರ್ ಗಾಗಿ ಬಂದಿರುತ್ತಾರೆ. ಆ ಸಮಯದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ- 6 ಮತ್ತು 7 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ

2.00 ಗಂಟೆ ಸಮಯದಲ್ಲಿ ಪೋಲಿಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದಿಃ 08.08.2021 ರಂದು ಪೋಲಿಸರು ತಿಮ್ಮಯ್ಯನವರ ಹಿತ್ತಲಿನ ಬಳಿ ನಾನು ತೋರಿಸಿದ ಜಾಗದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಹಿತ್ತಲಿನ ಜಾಗದಲ್ಲಿ ತೆಗೆದ ಫೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

1 ನೇ ಆರೋಪಿಯು ನನ್ನ ಎಡಗೈಗೆ ಹಲ್ಲಿನಿಂದ ಕಚ್ಚಿರುತ್ತಾರೆ ಎಂದರೆ ಸರಿ. ಚಾಸಾ-3 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ನಿಪಿ-2 ರ ಮಹಜರನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ನಿಪಿ-4 ರ ಮಹಜರನ್ನು ಬೆಳಗ್ಗೆ 10.00 ರಿಂದ 11.00 ಗಂಟೆವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿತರ ಪರ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.